ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/32/ಇಸಿಎಸ್(2)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com

ದಿನಾಂಕ: 10.03.2025

## ಜ್ಞಾಪನ

ವಿಷಯ: ನವೆಂಬರ್-2024 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/32/ಇಸಿಎಸ್(2)/2024 ದಿ:10.03.2025
2.ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17.04.2015
3.ಸರ್ಕಾರಿ ತಿದ್ದುಪಡಿ ಆದೇಶಸಂ:ಇಡಿ/87/ಟಿಪಿಇ/2023 ಬೆಂಗಳೂರು ದಿ:16.02.2024
4.ತಾಂತ್ರಿಕ ಪರೀಕ್ಷಾ ಮಂಡಳಿಯ 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.3&184.4

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡುವಂತೆ ಸೂಚಿಸಲಾಗಿದೆ.

ಮರುಮೌಲ್ಯಮಾಪಕರು ಮರುಮೌಲ್ಯಮಾಪನ ಕೇಂದ್ರದಲ್ಲಿ ಬೆಳಗ್ಗೆ 9.30 ಗಂಟೆಗೆ ಹಾಜರಾಗತಕ್ಕದ್ದು ಮತ್ತು ತಮ್ಮ ವಿಭಾಗದ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡಿ ತಮ್ಮ ಬಿಟಿಇ ಲಿಂಕ್ಸ್‌ನಲ್ಲಿನ Staff ID ಅನ್ನು ಹಾಜರಾತಿ ಪುಸ್ತಕದಿಂದ ಗುರುತು ಮಾಡಿಕೊಳ್ಳತಕ್ಕದ್ದು ಹಾಗೂ ಸಂಜೆ 5.00 ಗಂಟೆವರೆಗೆ ಕೇಂದ್ರದಲ್ಲಿ ಹಾಜರಿದ್ದು, ಕೆಲಸ ನಿರ್ವಹಿಸತಕ್ಕದ್ದು.

**ಮರುಮೌಲ್ಯಮಾಪನ (Revaluation):-**

1. ಸಂಬಂಧಿಸಿದ ವಿಭಾಗ/ಶಿಬಿರದ ಮೇಲ್ವಿಚಾರಕರಿಂದ ಮರುಮೌಲ್ಯಮಾಪನ ಮಾಡಬೇಕಾದ ಉತ್ತರಪತ್ರಿಕೆಗಳ ಪ್ಯಾಕೆಟ್‌ಗಳನ್ನು ಪಡೆದು ಪರಿಶೀಲಿಸಿ ನಂತರ Issue Register ನಲ್ಲಿ ಸಹಿ ಮಾಡತಕ್ಕದ್ದು.

2. ತಾಂತ್ರಿಕ ಪರೀಕ್ಷಾ ಮಂಡಳಿಯ 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.3 & 184.4 ರನ್ವಯ ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ಜಾರಿಗೆ ತರಲಾಗಿದೆ.
   a. ಮರುಮೌಲ್ಯಮಾಪನಕ್ಕಾಗಿ ಸ್ವೀಕೃತಗೊಂಡ ಉತ್ತರ ಪತ್ರಿಕೆಯನ್ನು <u>ಒಬ್ಬರು ಹಿರಿಯ ಉಪನ್ಯಾಸಕರು</u> ಸಂಬಂಧಪಟ್ಟ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ ಸದಸ್ಯರಿಂದ ದೃಢೀಕೃತಗೊಂಡ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ವಯ ಮರುಮೌಲ್ಯಮಾಪನ ಮಾಡುವುದು ಮತ್ತು R.V form-I ನಮೂನೆಯಲ್ಲಿ coded ಉತ್ತರಪತ್ರಿಕೆಗಳ ಮರು ಮೌಲ್ಯಮಾಪನ ಅಂಕಗಳನ್ನು ನಮೂದಿಸುವುದು.
   b. R.V form-I ರಲ್ಲಿ ನಮೂದಿಸಿರುವ ಮರುಮೌಲ್ಯಮಾಪನ ಅಂಕಗಳನ್ನು ಮರುಮೌಲ್ಯಮಾಪಕರು ಅಂಕಪಟ್ಟಿಗೆ (ಮಾರ್ಕ್ಸ್‌ಲಿಸ್ಟ್) ವರ್ಗಾಯಿಸುವುದು.
   c. ಮರುಮೌಲ್ಯಮಾಪಕರು ಮಾರ್ಕ್ಸ್‌ಲಿಸ್ಟ್‌ಗೆ ಅಂಕಗಳನ್ನು ವರ್ಗಾಯಿಸುವ ಮುನ್ನ ಉತ್ತರ ಪತ್ರಿಕೆಗಳ ಲಕೋಟೆಯಲ್ಲಿ ಇಡಲಾಗಿರುವ R.V form-I ನಮೂನೆಯಲ್ಲಿ ಮಾರ್ಕ್ಸ್‌ಲಿಸ್ಟ್‌ನಲ್ಲಿನ coded Register Number ಗಳ ಕ್ರಮದಲ್ಲಿಯೇ ಪ್ರಶ್ನೆವಾರು ಹಾಗೂ coded ಸಂಖ್ಯೆಗಳನುಸಾರ ಅಂಕಗಳನ್ನು ನಮೂದಿಸಿ ಪರಿಶೀಲಿಸಿ ವರ್ಗಾಯಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

Scanned with CamScanner

**ವಿಶೇಷ ಸೂಚನೆ:** ವಿದ್ಯಾರ್ಥಿಯು ಮರುಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳ ಫಲಿತಾಂಶವನ್ನು (ಮರುಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳು ಹೆಚ್ಚಾದಲ್ಲಿ ಮಾತ್ರ) ನೀಡಲಾಗುವುದು. ಇಲ್ಲವಾದಲ್ಲಿ ಮೊದಲನೇ ಮೌಲ್ಯಮಾಪನದ ಅಂಕಗಳನ್ನು ಮುಂದುವರೆಸಲಾಗುವುದು.

3. ಭರ್ತಿ ಮಾಡಿದ R.V form-I ನಮೂನೆಗಳನ್ನು ಮರುಮೌಲ್ಯಮಾಪನ ಮಾಡಿದ ಉತ್ತರಪತ್ರಿಕೆಗಳ ಲಕೋಟೆಯಲ್ಲಿಯೇ ಇಡತಕ್ಕದ್ದು. ಅಂಕಪಟ್ಟಿಗಳನ್ನು (ಮಾರ್ಕ್ಸ್‌ಲಿಸ್ಟ್) ಮಾತ್ರ ಶಿಬಿರದಲ್ಲಿ ಸಂಬಂಧಪಟ್ಟ ವಿಭಾಗದ ಉತ್ತರಪತ್ರಿಕೆಗಳ ಭದ್ರತಾ ಕೊಠಡಿಯ ಅಧಿಕಾರಿಗೆ ನೀಡುವುದು.

4. ಮರುಮೌಲ್ಯಮಾಪಕರು ಪ್ರತಿ ದಿನ ಕನಿಷ್ಠ 20 ಉತ್ತರ ಪತ್ರಿಕೆಗಳನ್ನು ಸಂಪೂರ್ಣವಾಗಿ ಮರುಮೌಲ್ಯಮಾಪನ ಮಾಡಬೇಕು. ದಿನದ ಅಂತ್ಯದೊಳಗೆ ಅಪೂರ್ಣವಾದ ಪ್ಯಾಕೆಟ್‌ಗಳನ್ನು ಇಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

5.ಶೂನ್ಯ ಅಂಕಗಳನ್ನು ದಾಖಲಿಸುವಾಗ ಅಕ್ಷರಗಳಲ್ಲಿಯೇ ಅಂಕಗಳನ್ನು ನಮೂದಿಸಲು (ಉದಾ: Zero Zero) ಸೂಚಿಸಲಾಗಿದೆ.

6. ಮರುಮೌಲ್ಯಮಾಪನ ನಮೂನೆಯನ್ನು ಯಾವುದೇ ರೀತಿಯ ತಪ್ಪುಗಳು ಇಲ್ಲದಂತೆ ಸಂಪೂರ್ಣವಾಗಿ ಭರ್ತಿ ಮಾಡಿ ಖಾಲಿ ಇದ್ದ ಕಡೆ ಅಡ್ಡಗೆರೆ ಹಾಕುವುದು ಮರುಮೌಲ್ಯಮಾಪಕರು ಪೂರ್ಣಸಹಿ ಮಾಡಿ ಕೋಡ್(Staff Id) & ವಿಳಾಸ ಬರೆಯಲು ಸೂಚಿಸಲಾಗಿದೆ.

7. ಮಾರ್ಕ್‌ಲಿಸ್ಟ್ ಮತ್ತು ಮರುಮೌಲ್ಯಮಾಪನ ನಮೂನೆಗಳಲ್ಲಿ ಅಂಕಗಳನ್ನು ಸ್ಪುಟವಾಗಿ ಹಾಗೂ ಸ್ಪಷ್ಟವಾಗಿ ಬರೆಯುವುದು. ಯಾವುದೇ ಕಾರಣಕ್ಕೂ ಅಂಕಗಳನ್ನು ತಿದ್ದಬಾರದಾಗಿ ಸೂಚಿಸಿದೆ.

8. ಮೌಲ್ಯಮಾಪನವಾದ ಉತ್ತರ ಪತ್ರಿಕೆಯನ್ನು ಮರುಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಉತ್ತರ ಪತ್ರಿಕೆಯ ಒಳಪುಟಗಳಲ್ಲಿ ಅಂಕಗಳನ್ನು ನಮೂದಿಸಬಾರದು. ಅಂಕಗಳನ್ನು R.V form-I ರಲ್ಲಿ ಮಾತ್ರ ನಮೂದಿಸುವುದು.

**ಮೂರನೇ ಮೌಲ್ಯಮಾಪನ (3rd Valuation):-**

ತಾಂತ್ರಿಕ ಪರೀಕ್ಷಾ ಮಂಡಳಿಯ 184ನೇ ವಿಶೇಷ ಕೇಂದ್ರ ಸಭೆಯ ನಿರ್ಣಯ 184.3 & 184.4 ರನ್ವಯ ಮೌಲ್ಯಮಾಪನದ ಅಂಕಗಳು ಮತ್ತು ಮರುಮೌಲ್ಯಮಾಪನದ ಅಂಕಗಳ ವ್ಯತ್ಯಾಸವು ಗರಿಷ್ಠ ಅಂಕಗಳ ಶೇ.10ಕ್ಕಿಂತ ಹೆಚ್ಚಿನ ವ್ಯತ್ಯಾಸವಿದ್ದಲ್ಲಿ ಮೂರನೇ ಮೌಲ್ಯಮಾಪನವನ್ನು (3rd Valuation) ಈ ಕೆಳಕಂಡಂತಿನ ಸಮಿತಿಯು ಜರುಗಿಸುವುದು.

a) ಇಬ್ಬರು ಹಿರಿಯ ಉಪನ್ಯಾಸಕರುಗಳು (ಪರೀಕ್ಷಕರ ಸಮಿತಿಯ ಅಧ್ಯಕ್ಷರ ಜೇಷ್ಠತೆಯ ಕೆಳಗಿನವರು)
b) ಸಂಬಂಧಪಟ್ಟ ವಿಷಯವನ್ನು ಬೋಧಿಸಿರುವ ಇಬ್ಬರು ಹಿರಿಯ ಉಪನ್ಯಾಸಕರು

i) ಮೂರನೇ ಮೌಲ್ಯಮಾಪನ (3rd Valuation) ಕ್ಕಾಗಿ ಸ್ವೀಕೃತಗೊಂಡ ಉತ್ತರ ಪತ್ರಿಕೆಯನ್ನು ಸಂಬಂಧಪಟ್ಟ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ ಸದಸ್ಯರಿಂದ ದೃಢೀಕೃತಗೊಂಡ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳನ್ವಯ ಮೇಲ್ಕಂಡ ನಾಲ್ಕು ಜನ ಉಪನ್ಯಾಸಕರುಗಳ ಸಮಿತಿಯು ಒಟ್ಟಾಗಿ ಮರುಮೌಲ್ಯಮಾಪನ ಮಾಡುವುದು ಮತ್ತು ಒಂದೇ R.V form-I ನಮೂನೆಯಲ್ಲಿ coded ಉತ್ತರಪತ್ರಿಕೆಗಳ ಮರುಮೌಲ್ಯಮಾಪನದ ಅಂಕಗಳನ್ನು ಒಮ್ಮತದಿಂದ ನಮೂದಿಸುವುದು.

ii) R.V form-I ರಲ್ಲಿ ನಮೂದಿಸಿರುವ ಮರುಮೌಲ್ಯಮಾಪನದ ಅಂಕಗಳನ್ನು ಒಮ್ಮತದಿಂದ ಸಮಿತಿಯು ಅಂಕಪಟ್ಟಿಗೆ (ಮಾರ್ಕ್ಸ್‌ಲಿಸ್ಟ್) ವರ್ಗಾಯಿಸುವುದು.

iii) ಸಮಿತಿಯು ಮಾರ್ಕ್ಸ್‌ಲಿಸ್ಟ್‌ಗೆ ಅಂಕಗಳನ್ನು ವರ್ಗಾಯಿಸುವ ಮುನ್ನ ಉತ್ತರ ಪತ್ರಿಕೆಗಳ ಲಕೋಟೆಯಲ್ಲಿ ಇಡಲಾಗಿರುವ R.V form-I ನಮೂನೆಯಲ್ಲಿ ಮಾರ್ಕ್ಸ್‌ಲಿಸ್ಟ್‌ನಲ್ಲಿನ coded Register Number ಗಳ ಕ್ರಮದಲ್ಲಿಯೇ ಪ್ರಶ್ನೆವಾರು ಹಾಗೂ coded ಸಂಖ್ಯೆಗಳನುಸಾರ ಅಂಕಗಳನ್ನು ನಮೂದಿಸಿ ಪರಿಶೀಲಿಸಿ ವರ್ಗಾಯಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

iv) ಮರುಮೌಲ್ಯಮಾಪನ ನಮೂನೆಯನ್ನು ಯಾವುದೇ ರೀತಿಯ ತಪ್ಪುಗಳು ಇಲ್ಲದಂತೆ ಸಂಪೂರ್ಣವಾಗಿ ಭರ್ತಿ ಮಾಡಿ ಖಾಲಿ ಇದ್ದ ಕಡೆ ಅಡ್ಡಗೆರೆ ಹಾಕುವುದು ಹಾಗೂ ಸಮಿತಿಯ ಎಲ್ಲಾ ಸದಸ್ಯರು R.V form-I ನಮೂನೆಯಲ್ಲಿ ಮತ್ತು Marks List (ML) ಗಳಲ್ಲಿ ಪೂರ್ಣಸಹಿ ಮಾಡಿ ಕೋಡ್(Staff Id) & ವಿಳಾಸ ಬರೆಯಲು ಸೂಚಿಸಲಾಗಿದೆ.

Scanned with CamScanner

ವಿಶೇಷ ಸೂಚನೆ:

1) ಮೌಲ್ಯಮಾಪನದ ಅಂಕಗಳು ಮತ್ತು ಮರುಮೌಲ್ಯಮಾಪನದ ಅಂಕಗಳ ವ್ಯತ್ಯಾಸವು ಗರಿಷ್ಠ ಅಂಕಗಳ ಶೇ.10ಕ್ಕಿಂತಾ ಕಡಿಮೆ ಇದ್ದಲ್ಲಿ ವಿದ್ಯಾರ್ಥಿಯು ಮರುಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳ ಫಲಿತಾಂಶವನ್ನು ನೀಡಲಾಗುವುದು (ಮರುಮೌಲ್ಯಮಾಪನದ ಅಂಕಗಳು ಹೆಚ್ಚಾಗಿದ್ದಲ್ಲಿ ಮಾತ್ರ). ಇಲ್ಲವಾದಲ್ಲಿ ಮೊದಲನೇ ಮೌಲ್ಯಮಾಪನದ ಅಂಕಗಳನ್ನು ಮುಂದುವರೆಸಲಾಗುವುದು.

2) ಮೌಲ್ಯಮಾಪನದ ಅಂಕಗಳು ಮತ್ತು ಮರುಮೌಲ್ಯಮಾಪನದ ಅಂಕಗಳ ವ್ಯತ್ಯಾಸವು ಗರಿಷ್ಠ ಅಂಕಗಳ ಶೇ.10ಕ್ಕಿಂತಾ ಹೆಚ್ಚಿನ ವ್ಯತ್ಯಾಸವಿದ್ದಲ್ಲಿ ಮಂಡಳಿಯು ಮೂರನೇ ಮೌಲ್ಯಮಾಪನಕ್ಕಾಗಿ (3rd Valuation) ಮೇಲ್ಕಂಡಂತೆ ಸಮಿತಿಗೆ ವಹಿಸುವುದು.

3) **ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂರನೇ ಮೌಲ್ಯಮಾಪನದಲ್ಲಿ (3rd Valuation) ಸಮಿತಿಯು ನೀಡಿದ ಅಂಕಗಳು ಅಂತಿಮ.**

ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಸಮರ್ಪಕವಾಗಿ ಮರುಮೌಲ್ಯಮಾಪನ ಕಾರ್ಯ ಮಾಡುವಂತೆ ಸೂಚಿಸುತ್ತಾ, ಒಂದು ವೇಳೆ ಲೋಪದೋಷಗಳನ್ನು ಎಸಗಿದಲ್ಲಿ/ಸೂಚನೆಗಳನ್ನು ಪಾಲಿಸದಿದ್ದಲ್ಲಿ ಮರುಮೌಲ್ಯಮಾಪಕರ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಗಳು, ಸರ್ಕಾರಿ ಆದೇಶ ಮತ್ತು ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ಮರುಮೌಲ್ಯಮಾಪನ ಕೇಂದ್ರದ ಮರುಮೌಲ್ಯಮಾಪಕರುಗಳಿಗೆ- ಶಿಬಿರದ ಮೇಲ್ವಿಚಾರಕರಿಂದ ಪರಿಚಲನೆ ಮೂಲಕ
2. ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ- ಸೂಕ್ತ ಕ್ರಮಕ್ಕಾಗಿ

ಪ್ರತಿ:
1. ಶಿಬಿರಾಧಿಕಾರಿಗಳು- ಮುಂದಿನ ಕ್ರಮಕ್ಕಾಗಿ
2. ಶಿಬಿರದ ಮೇಲ್ವಿಚಾರುಕರುಗಳಿಗೆ
3. ಆಯುಕ್ತರವರ ಆಪ್ತಶಾಖೆ
4. ನಿರ್ದೇಶಕರವರ ಆಪ್ತಶಾಖೆ
5. ಕಾರ್ಯದರ್ಶಿಯವರ ಆಪ್ತ ಶಾಖೆ

Scanned with CamScanner